


## ಜ್ಯೋತಿಷ್ಯ ಜ್ಞಾನ ನೀಡುವ 'ಶನಿ'

ಈ ಹಿಂದೆ ಕಲರ್ಸ್ ಕನ್ನಡದಲ್ಲಿ ಪ್ರಸಾರವಾದ 'ಶನಿ' ಧಾರಾವಾಹಿಯಿಂದ ಜ್ಯೋತಿಷ್ಯ ಶಾಸ್ತ್ರದ ಬಗೆಗೆ ತಿಳಿದುಕೊಳ್ಳಲು ಸಹಾಯವಾಯಿತು. ಜಗದೊಡೆಯ ಸೂರ್ಯ, ಆತನ ಪತ್ನಿಯರಾದ ಸಾನ್ಯ, ಛಾಯಾ, ಪುತ್ರರಾದ ಯಮ, ಶನಿ, ಹಾಗೂ ಶನಿಯ ವಾಹನ ಕಾಕ ರಾಜ್, ದೇವಗುರು ಬೃಹಸ್ಪತಿ, ದೈತ್ಯ ಗುರು ಶುಕ್ರಾಚಾರ್ಯ, ಮಂಗಳ, ಬುಧ, ಚಂದ್ರ, ಛಾಯಾ ಗ್ರಹಗಳಾದ ರಾಹು ಕೇತು ಗ್ರಹಗಳು ಜ್ಯೋತಿಷ್ಯ ಶಾಸ್ತ್ರದ ಕುಂಡಲಿಯಲ್ಲಿನ 12ನೇ ಮನೆಯಲ್ಲಿ ಯಾವ ಗ್ರಹ ಬಂದಾಗ ಅದರ ಕ್ರಿಯೆ ಹೇಗಿರುತ್ತೆ ಎಂಬ ಬಗ್ಗೆ ತಿಳಿದುಕೊಳ್ಳಲು ಸಹಾಯವಾಗಿತ್ತು. ಈಗ ಅದೇ 'ಶನಿ' ಕಲರ್ಸ್ ಸೂಪರ್‌ನಲ್ಲಿ ಮರುಪ್ರಸಾರ ಆಗುತ್ತಿರುವುದು ಸ್ವಾಗತಾರ್ಹ.

—ಅನುರಾಧ ಟಿ., ದಾವಣಗೆರೆ

## ವೀಕ್ಷಕರನ್ನು ಹಿಂಸಿಸುವ ಧಾರಾವಾಹಿಗಳು

ಇತ್ತೀಚೆಗೆ ಧಾರಾವಾಹಿಗಳನ್ನು ನೋಡುವಾಗ ಚಿತ್ರಹಿಂಸೆ ಆಗುತ್ತಿದೆ. ತಾಳಮೇಳವಿಲ್ಲದ ಕಥೆಗಳು, ಪಾತ್ರಕ್ಕೆ ಸರಿಹೊಂದದ ಕಲಾವಿದರು, ಬಿಗುವಿಲ್ಲದ ನಿರ್ದೇಶನ, ಆಡಂಬರದ ಉಡುಪುಗಳು, ಐಷಾರಾಮಿ ಮನೆಗಳು ಮತ್ತು ಫ್ಯಾನ್ಸಿ ಕಾರುಗಳು ವೀಕ್ಷಕರನ್ನು ಧಾರಾವಾಹಿಯಿಂದ ದೂರ ತಳ್ಳುತ್ತಿವೆ. ವೀಕ್ಷಕರ ಸಹನೆ ಪರೀಕ್ಷಿಸಲು ಡಬ್ ಆದ ಧಾರಾವಾಹಿಗಳ ಹಿಂಸೆ ಬೇರೆ. ಮುಖ ಪರಿಚಯವಿಲ್ಲದ ಕಲಾವಿದರು ಕನ್ನಡ ಮಾತನಾಡುವುದನ್ನು ನೋಡಿದಾಗ ಕನ್ನಡ ವಾಹಿನಿಗಳಿಗೆ ಈ ಗತಿ ಬಂತೇ ಎಂದು ಅನಿಸುತ್ತದೆ.

—ರಮಾನಂದ ಶರ್ಮಾ, ನವದೆಹಲಿ

ವಾರದ ಪತ್ರ

## ಶಾಸ್ತ್ರೀಜಿ ಅವರನ್ನು ಮರೆಯಬಹುದೆ?

ಚಂದನದ ಪ್ರಸಿದ್ಧ ಕ್ವಿಜ್ ಕಾರ್ಯಕ್ರಮ 'ಥಟ್ ಅಂತ ಹೇಳಿ' ಇತ್ತೀಚಿನ ಸಂಚಿಕೆಯಲ್ಲಿ 'ಭಾರತ ರತ್ನ' ಪಡೆದ ಇವರನ್ನು ಗುರುತಿಸಿ ಎಂದು ಮಾಜಿ ಪ್ರಧಾನ ಮಂತ್ರಿ ಚೌಧರಿ ಚರಣ್ ಸಿಂಗ್ ಅವರ ಫೋಟೊ ತೋರಿಸಿದರು. ಆಗ ಒಬ್ಬ ಸ್ಪರ್ಧಿ, ಆಯ್ಕೆಗಳು ಬರುವ ಮೊದಲೇ ಲಾಲ್ ಬಹದ್ದೂರ್ ಶಾಸ್ತ್ರಿ ಎಂದು 'ಥಟ್ಟಂತ' ನೀಡಿದ ಉತ್ತರ ನೋಡಿ ಬೆಪ್ಪಾಗುವ ಸರದಿ ವೀಕ್ಷಕರಾದ ನಮ್ಮದಾಗಿತ್ತು. 'ಜೈ ಜವಾನ್ ಜೈ ಕಿಸಾನ್' ಎಂಬ ಘೋಷ ವಾಕ್ಯ ಹೇಳಿದ್ದ, ದೇಶ ಕಂಡ ಅತ್ಯಂತ ಸರಳ ವ್ಯಕ್ತಿತ್ವದ ಸ್ವತಂತ್ರ ಭಾರತದ ಎರಡನೇ ಪ್ರಧಾನಿ ಶಾಸ್ತ್ರಿಯವರ ಫೋಟೊವನ್ನು ಆ ಸ್ಪರ್ಧಿ ನೋಡೇ ಇಲ್ಲವೇ? ಈ ರೀತಿಯ ಸನ್ನಿವೇಶಗಳು ನಿಜಕ್ಕೂ ನಾಚಿಕೆಗೇಡಿನ ವಿಷಯ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಹಳ್ಳಿಗೂ ಸಾಗಲಿ ಭೋಜನ ಪಯಣ

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ' ಕಾರ್ಯಕ್ರಮದಲ್ಲಿ ನಿರೂಪಕ ಸಿಹಿ ಕಹಿ ಚಂದ್ರು ಅವರು ನಳ ಮಹಾರಾಜ ಎಂದು ಪ್ರಶಂಸೆಗೆ ಪಾತ್ರವಾಗುತ್ತಿದ್ದಾರೆ. ತಂಡದೊಂದಿಗೆ ಅವರು ಊರೂರು, ಮನೆ ಮನೆಗಳ ವಿಶೇಷ ಸವಿರುಚಿಗಳನ್ನು ಸವಿಯುತ್ತಾರೆ. ಆದರೆ ಅವರ ಪಯಣ ಸ್ಥಿತಿವಂತ ಮತ್ತು ನಗರದ ಕುಟುಂಬಗಳಿಗೆ ಸೀಮಿತವಾಗುತ್ತಿದೆ. 'ಬೊಂಬಾಟ್ ಭೋಜನ' ತಂಡದ ಪಯಣ ಗ್ರಾಮೀಣ ಪ್ರದೇಶದವರೆಗೂ ವಿಸ್ತರಿಸಲಿ. ಗ್ರಾಮೀಣ ಸೊಗಡಿನ ಬಸ್ಸಾರು, ರಾಗಿಮುದ್ದೆ, ಹುಳಿಸೊಪ್ಪು, ಕಾಳುಗಳ ವಿಶೇಷ ಖಾದ್ಯ ಸೇರಿ ಹಳ್ಳಿಗಳ ಸಿಹಿ ತಿನಿಸುಗಳನ್ನೂ ಕನ್ನಡ ನಾಡಿಗೆ ಪರಿಚಯಿಸಲಿ ಎನ್ನುವುದು ನನ್ನ ಆಶಯ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಜಾಗೃತ ಜೂನಿಯರ್ಸ್

ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್' ಮಕ್ಕಳ ಕಾರ್ಯಕ್ರಮ ನೋಡಲು ಬಹಳ ಸಂತೋಷವಾಗುತ್ತದೆ. ನಾಟಕದ ಮೂಲಕ ಸಾಮಾಜಿಕ ಕಾಳಜಿ ಮತ್ತು ಜಾಗೃತಿಯನ್ನು ಮೂಡಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಹೆಣ್ಣು ಭ್ರೂಣ ಹತ್ಯೆ ಕುರಿತ ನಾಟಕ ಮನಮಿಡಿಯುವಂತೆ ಇತ್ತು.

—ಬಿ.ಎಸ್. ಮುಳ್ಳೂರ, ಹಲಗತ್ತಿ



## ವಚನ ಗಾಯನ ಹೆಚ್ಚಲಿ

ವಚನ ಸಾಹಿತ್ಯದ ಕಾರಣಕ್ಕೆ 12ನೇ ಶತಮಾನ ಚರಿತ್ರೆಯಲ್ಲಿ ಸ್ಮರಣೀಯ. ಕ್ರಾಂತಿಯೋಗಿ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದ ಶ್ರೇಷ್ಠ ವಚನಕಾರರ ವಚನಗಳು ಸಾಮಾಜಿಕ ಕ್ರಾಂತಿಯನ್ನೇ ಉಂಟು ಮಾಡಿದವು. ಝೀ ಕನ್ನಡದ 'ಸರಿಗಮಪ' ರಿಯಾಲಿಟಿ ಶೋನಲ್ಲಿ ಬಸವಣ್ಣನವರ 'ಉಳ್ಳವರು ಶಿವಾಲಯ ಮಾಡುವರು' ಎಂಬ ವಚನವನ್ನು ಯುವ ಗಾಯಕಿ ಅಮೂಲ್ಯ, ಸುಶ್ರಾವ್ಯ ಗಾಯನದ ಮೂಲಕ ಪ್ರಸ್ತುತಪಡಿಸಿದರು. ಈಗಿನ ಸಾಮಾಜಿಕ ಬದುಕಿಗೂ ಕನ್ನಡಿ ಹಿಡಿಯುವಂತೆ ಇರುವ ವಚನಗಳನ್ನು ಸಂಗೀತದ ರಿಯಾಲಿಟಿ ಶೋಗಳಲ್ಲಿ ಹೆಚ್ಚು ಹೆಚ್ಚಾಗಿ ಪ್ರಚುರಪಡಿಸುವಂತೆ ಆಗಲಿ.

— ಪ್ರತಿಭಾ

## ಕಣ್ಣ ಹನಿ ಮುತ್ತಾದ ಬೇಂದ್ರೆ ಅಜ್ಜ

ಕವಿ ದ.ರಾ. ಬೇಂದ್ರೆ ಅವರ ಬದುಕಿನ ಭಾಗವನ್ನು ಡ್ರಾಮಾ ಜೂನಿಯರ್ಸ್‌ನ 'ನಾ ಕಂಡ ಬೇಂದ್ರೆ ಅಜ್ಜ' ನಾಟಕದಲ್ಲಿ ಮಕ್ಕಳು ಮನೋಜ್ಞವಾಗಿ ನಟಿಸಿದರು. ಬೇಂದ್ರೆ ಅವರ ಗೀತೆಗಳನ್ನು ತುಂಬಾ ಅರ್ಥಪೂರ್ಣವಾಗಿ ಪ್ರಸ್ತುತಪಡಿಸಿದರು.

ಮಗು ಜ್ವರದಿಂದ ಬಳಲುತ್ತಿರುವಾಗ ಔಷಧ ತರಲು ಹಣವಿಲ್ಲದ ಪರಿಸ್ಥಿತಿ. ಆ ವಿಷಮ ಗಳಿಗೆಯಲ್ಲಿ ಮಗು ಸತ್ತು ಹೋಗುತ್ತದೆ. ತಾಯಿಯ ಅಳಲು ಗಗನ ಮುಟ್ಟುತ್ತದೆ. ಆಗ ಬೇಂದ್ರೆ ಅವರ ನೋಟ ನಿಜಕ್ಕೂ ಕಣ್ಣಲ್ಲಿ ನೀರು ತರಿಸಿತು. ಬೇಂದ್ರೆ 'ನೀ ಹಿಂಗ ನೋಡಬ್ಯಾಡ ನನ್ನ, ನೀ ಹಿಂಗ ನೋಡಿದರ ನನ್ನ, ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ' ಎಂದು ಹಾಡುತ್ತಾ ಪತ್ನಿಯನ್ನು ಸಂತೈಸುವ ದೃಶ್ಯ ಮಕ್ಕಳ ಪ್ರತಿಭೆಗೆ ಸಾಕ್ಷೀಭೂತವಾಯಿತು.

—ಭಾರತೀ ಗಂಗಾಧರ್, ಬೆಂಗಳೂರು